ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆಗಳ ಇಲಾಖೆ)

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ (ಆಡಳಿತ),
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ, ವಾಣಿಜ್ಯ ತೆರಿಗೆ ಭವನ,
ದೇವರಾಜ್ ಅರಸ್ ಬಡಾವಣೆ, 'ಎ' ಬ್ಲಾಕ್, ದಾವಣಗೆರೆ.
ಫೋನ್ ನಂ.08192-231359, 08192-254838 ದಿನಾಂಕ: 09.02.2023.

## ಟೆಂಡರ್ ಪ್ರಕಟಣೆ

ವಿಷಯ: ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿ.ಸ.ಸೇ.ತೆ. ಕಛೇರಿ, ದಾವಣಗೆರೆ ವಿಭಾಗದ ಅಧೀನ **ಕಛೇರಿಗಳಿಗೆ ಸರ್ಕಾರಿ ಅಧಿಕೃತ ಕೆಲಸಕ್ಕೆ '10' ಖಾಸಗಿ ವಾಹನಗಳನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಟೆಂಡರ್ ಪ್ರಕ್ರಿಯೆ ಮೂಲಕ ಪಡೆಯುವ ಬಗ್ಗೆ.**

ಉಲ್ಲೇಖ: ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ), ಬೆಂಗಳೂರು ಇವರ ಕಛೇರಿಯ ಪತ್ರ ಸಂಖ್ಯೆ: ವಿಹೆಚ್‌ಟಿ/ಸಿಆರ್-15/2022-23, ದಿನಾಂಕ: 22.12.2022.

*****

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ, ದಾವಣಗೆರೆ ವಿಭಾಗದ ದಾವಣಗೆರೆ ಸ್ಥಳೀಯ ಕಚೇರಿಗಳಿಗೆ 05 ವಾಹನಗಳು ಹಾಗೂ ಬಳ್ಳಾರಿ ಕಛೇರಿಗಳಿಗೆ-1, ಹೊಸಪೇಟೆ ಕಛೇರಿಗಳಿಗೆ-2, ಚಳ್ಳಕೆರೆ ಕಛೇರಿಗಳಿಗೆ-1, ಕೊಪ್ಪಳ ಮತ್ತು ಗಂಗಾವತಿ ಕಛೇರಿಗಳಿಗೆ-1 ವಾಹನ ಸೇರಿದಂತೆ ಹಳದಿ ಬೋರ್ಡಿನ ನಾಲ್ಕು ಚಕ್ರಗಳ ಒಟ್ಟು 10 ಲಘು ವಾಹನಗಳ ಅವಶ್ಯಕತೆಯಿದ್ದು, ಮಾಲೀಕರೇ ಚಾಲಕರಿರುವ ವಾಹನಗಳ ಮಾಲೀಕರು ವಾಹನಗಳನ್ನು ಕಚೇರಿ ಆದೇಶ ದೊರೆತ ದಿನಾಂಕದಿಂದ: **31.03.2024** ರವರೆಗೆ ಅಥವಾ ಈ ಕಛೇರಿಯಿಂದ ನಿರ್ಧರಿಸುವ ಇನ್ನಿತರೆ ಯಾವುದೇ ದಿನಾಂಕದವರೆಗೆ ಮಾಸಿಕ ಬಾಡಿಗೆ ರೂ.**35,000/-** ರ ಮೊತ್ತಕ್ಕೆ ಅದರ ನಿರ್ವಹಣೆ ವೆಚ್ಚದ ಸ್ಥಿರ ಮೌಲ್ಯವಾಗಿರುತ್ತದೆ. ಈ ನಿಬಂಧನೆಗಳಿಗೆ ಒಳಪಟ್ಟು ಪೂರೈಸಲು ಆಸಕ್ತಿಯುಳ್ಳವರು ಮಾತ್ರ ಈ ಕಚೇರಿಯಿಂದ ಅರ್ಜಿಯನ್ನು ಪಡೆದು ಅದರಲ್ಲಿರುವ ಷರತ್ತುಗಳನ್ವಯ ಅರ್ಜಿಯನ್ನು ಭರ್ತಿ ಮಾಡಿ ದಿನಾಂಕ: **04.03.2023** ಸಂಜೆ: **05.00** ಗಂಟೆಯೊಳಗೆ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ, ದಾವಣಗೆರೆ ಇಲ್ಲಿಗೆ ಮುದ್ದಾಂ ಸಲ್ಲಿಸಲು ಸೂಚಿಸಿದೆ. ತದನಂತರ ಬಂದ ಯಾವುದೇ ಟೆಂಡರ್ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಈ ಕುರಿತು ದಿನಾಂಕ: 09.02.2023 ರಂದು ಇಲಾಖೆಯ ಸೂಚನಾ ಫಲಕದಲ್ಲಿ ಸಂಬಂಧಿಸಿದ ವಿವರವಾದ ಷರತ್ತುಗಳನ್ನು ಪ್ರಕಟಿಸಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿ ಅಥವಾ ದೂರವಾಣಿಯ ಮೂಲಕ ಸಂಪರ್ಕ ಮಾಡಬಹುದು. ಟೆಂಡರ್ ವಿವರಗಳು: (1) ಅವಶ್ಯವಿರುವ ವಾಹನಗಳ ಪ್ರಮಾಣ: 10 (2) ಟೆಂಡರ್ ಫಾರ್ಮ ಸಲ್ಲಿಸಲು ಕೊನೆಯ ದಿನಾಂಕ: **04.03.2023** ರ ಸಂಜೆ: **05.00** ವರೆಗೆ (3) ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ: **06.03.2023** ರ ಬೆಳಿಗ್ಗೆ: **11.00** ಗಂಟೆಗೆ (4) ಫೈನಾನ್ಸಿಯಲ್ ಬಿಡ್ ನ್ನು ತೆರೆಯುವ ಸಮಯ **ದಿನಾಂಕ: 08.03.2023** ರ ಬೆಳಿಗ್ಗೆ: **11.00** ಗಂಟೆಗೆ.

| ಕ್ರ ಸಂ. | ಅವಶ್ಯವಿರುವ ವಾಹನಗಳ ಸಂಖ್ಯೆ | ಸೇವೆ ಒದಗಿಸಬೇಕಾಗಿರುವ ಸ್ಥಳ |
|---|---|---|
| 01 | 05 | ದಾವಣಗೆರೆ |
| 02 | 01 | ಬಳ್ಳಾರಿ |
| 03 | 02 | ಹೊಸಪೇಟೆ |
| 04 | 01 | ಚಳ್ಳಕೆರೆ |
| 05 | 01 | ಕೊಪ್ಪಳ ಮತ್ತು ಗಂಗಾವತಿ |

ಸಹಿ/-

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ),
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ, ದಾವಣಗೆರೆ.

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ)
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ
ದಾವಣಗೆರೆ.